ದೂರವಾಣಿ ಸಂಖ್ಯೆ 2419677/2419361
ಫ್ಯಾಕ್ಸ್ 0821 2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ:ಜಿಎಲ್5/31/2020-21

ದಿನಾಂಕ 08.05.2021

## ಸುತ್ತೋಲೆ

ವಿಷಯ: ದೇಶದಾದ್ಯಂತ ಹರಡುತ್ತಿರುವ ಕೋವಿಡ್-19 (ಕೋರೊನಾ ವೈರಸ್) ವೈರಾಣುವಿನ ಎರಡನೇ ಅಲೆ ಹರಡುವಿಕೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಮಾರ್ಗ ಸೂಚಿ ಅನುಸರಿಸುವ ಬಗ್ಗೆ..

ಉಲ್ಲೇಖ:
1. Order No. RD 158 TNR 2020, Dated: 07.05.2021 of the Chief Secretary and Chairman, State Executive Committee, Karnataka Government Secretariat, Vidhana Soudha, Bangalore.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಜಿಎಲ್5/31/2020-21, ದಿನಾಂಕ: 27.04.2021
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಜಿಎಲ್5/31/2020-21, ದಿನಾಂಕ: 21.04.2021
4. Order No. RD 158 TNR 2020, Dated: 26.04.2021 of the Chief Secretary and Chairman, State Executive Vide Order No. RD 158 TNR 2020, dated 20.04.2021 of the Chief Secretary and Chairman, State Executive Committee, Karnataka Government Secretariat, Vidhana Soudha, Bangalore.

* * * * *

ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು, ನಿರ್ದೇಶಕರು, ಬಟವಾಡೆ ಅಧಿಕಾರಿಗಳು, ಅಧೀನ ಕಾಲೇಜುಗಳ ಪ್ರಾಂಶುಪಾಲರು, ನಿರ್ದೇಶಕರು, ಸ್ನಾತಕೋತ್ತರ ಕೇಂದ್ರಗಳು ಇವರುಗಳಿಗೆ ತಿಳಿಸುವುದೇನೆಂದರೆ, ದೇಶದಾದ್ಯಂತ ತೀವ್ರಗತಿಯಲ್ಲಿ ಹರಡುತ್ತಿರುವ ಕೋವಿಡ್-19 ಸೋಂಕಿನ (ಕೋರೊನಾ ವೈರಸ್) ಎರಡನೆಯ ಅಲೆಯ ಹರಡುವಿಕೆಯ ಸರಪಳಿಯನ್ನು ಮುರಿಯುವ ದೃಷ್ಟಿಯಿಂದ ಮೇಲಿನ ಉಲ್ಲೇಖಿತ (2 ಮತ್ತು 3)ರ ಸುತ್ತೋಲೆ ಮುಂದುವರಿಕೆಯಾಗಿ ಉಲ್ಲೇಖ(1)ರ ಆದೇಶದನ್ವಯ ದಿನಾಂಕ: 10.05.2021 ಬೆಳಗ್ಗೆ 6.00 ರಿಂದ 24.05.2021ರ ಬೆಳಗ್ಗೆ 6.00 ಗಂಟೆಯವರೆಗೆ ಕರ್ನಾಟಕ ರಾಜ್ಯ ಸರ್ಕಾರವು ಈ ಕುರಿತು ಹೊರಡಿಸಿರುವ **ಮಾರ್ಗಸೂಚಿಗಳಿಗೆ ಒಳಪಟ್ಟು** ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಮತ್ತು ಎಲ್ಲಾ ಕಛೇರಿಗಳಿಗೆ ದಿನಾಂಕ 10-05-2021ರಿಂದ ದಿನಾಂಕ 23-05-2021ರವರೆಗೆ ಬಿಡುವು ನೀಡಲಾಗಿದೆ.

1. ಸ್ನಾತಕೋತ್ತರ ಪದವಿ ಮತ್ತು ವಿಶ್ವವಿದ್ಯಾನಿಲಯದ ಘಟಕ /ಸಂಯೋಜಿತ ಕಾಲೇಜುಗಳ ಸ್ನಾತಕ ಪದವಿಯ ತರಗತಿಗಳನ್ನು ಈ ಅವಧಿಯಲ್ಲಿ ಎಂದಿನಂತೆ ಆನ್‌ಲೈನ್ (online) ಮೂಲಕ ತೆಗೆದುಕೊಳ್ಳುವುದು.

ಮು.ತಿ.ನೋ

2. ಬೋಧಕೇತರ ಉದ್ಯೋಗಿಗಳು ಅವಶ್ಯಕ ಕೆಲಸಗಳನ್ನು ಮನೆಯಿಂದಲೇ ನಿರ್ವಹಿಸಲು ಅನುಮತಿಸಲಾಗಿದೆ. ಅತ್ಯಾವಶ್ಯಕ ಸಂದರ್ಭಗಳಲ್ಲಿ ಕಛೇರಿ/ವಿಭಾಗದಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿದೆ.
3. ಮೊದಲನೇ ಸ್ನಾತಕೋತ್ತರ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆಂತರಿಕ ಪರೀಕ್ಷೆಗಳನ್ನು Online ಮುಖಾಂತರವೇ ನಡೆಸಲು ಹಾಗೂ Assignmentಗಳನ್ನು Onlineನಲ್ಲಿ ಸಲ್ಲಿಸಲು ಸೂಚಿಸಿದೆ.
4. 2021ರ ಮೇ ಮಾಹೆಯಲ್ಲಿ ನಿಗಧಿಗೊಳಸಿದ್ದ ಪರೀಕ್ಷೆಗಳು/ಪ್ರಾಯೋಗಿಕ ಪರೀಕ್ಷೆಗಳನ್ನು ಮುಂದೂಡಲು ಸೂಚಿಸಲಾಗಿದೆ. ಸ್ನಾತಕೋತ್ತರ ಎರಡನೇ ಸೆಮಿಸ್ಟರ್ ತರಗತಿಗಳನ್ನು Online ಮುಖಾಂತರ ಮೇ 25ರಿಂದ ನಡೆಸಲು ಅಗತ್ಯ ಕ್ರಮವನ್ನು ತೆಗೆದುಕೊಳ್ಳಲು ಸಂಬಂಧಿಸಿದ ಅಧ್ಯಕ್ಷರು / ನಿರ್ದೇಶಕರುಗಳಿಗೆ / ಸಂಯೋಜಕರಿಗೆ ಸೂಚಿಸಲಾಗಿದೆ.

**ಕೋವಿಡ್-19 (ಕೊರೊನ ವೈರಣು) ಸಾಂಕ್ರಮಿಕ ರೋಗ ಹರಡದಿರುವಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.**

8/5/2021

**ಕುಲಸಚಿವ**

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾ.ಗಂ., ಮೈಸೂರು.
2. ಎಲ್ಲಾ ಅಂಗ ಸಂಸ್ಥೆಗಳ ನಿರ್ದೇಶಕರು/ಸಂಯೋಜನಾಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ/ಮಂಡ್ಯ/ಚಾಮರಾಜನಗರ.
4. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು
6. ಕುಲಪತಿ /ಕುಲಸಚಿವ /ಕುಲಸಚಿವ (ಪರೀಕ್ಷಾಂಗ) /ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈವಿವಿ, ಮೈಸೂರು.
7. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು (ಮಾಹಿತಿಗಾಗಿ)
8. ಕಛೇರಿ ಪ್ರತಿ.